

ಅಂಕ ಗಳಿಕೆ, ಉದ್ಯೋಗ ಸಾಧನೆಗಳಷ್ಟೇ ಶಾಲೆಗಳ ಉದ್ದೇಶವಲ್ಲ ಎನ್ನುವುದನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು. ಅವು ಶಾಲೆಗೆ ಮಕ್ಕಳನ್ನು ಕಳಿಸುವುದರ ಒಂದು ಆಯಾಮ ಮಾತ್ರ. ಒಂದು ನಿರ್ದಿಷ್ಟ ನಿಯಂತ್ರಿತ ವಾತಾವರಣ, ಶಿಸ್ತು, ಇತರ ಮಕ್ಕಳ ಒಡನಾಟ, ಸಾಮಾಜಿಕ ಕೌಶಲಗಳು ಮತ್ತು ಜೀವನ ಪಾಠ ಕಲಿಸುವುದು– ಶಾಲೆಗಳ ಮುಖ್ಯ ಉದ್ದೇಶ. ಸಮಸ್ಯೆಗಳು ಎದುರಾದಾಗ ಅವುಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು, ತಮ್ಮ ಹಕ್ಕುಗಳಿಗಾಗಿ ಹೇಗೆ ಹೋರಾಡಬೇಕು ಎಂಬ ತಂತ್ರಗಳನ್ನೂ ಕಲಿಯುವ ತಾಣ ಶಾಲೆ. ಶಾಲೆಗಳಲ್ಲಿ ಕಲಿಸುವ ಶಿಕ್ಷಕರೂ, ಶಾಲೆಗಳಿಗೆ ಮಕ್ಕಳನ್ನು ಕಲಿಸುವ ಪೋಷಕರೂ ಇದನ್ನು ಮನಗಾಣಬೇಕು. 'ಶಾಲೆ' ಎಂಬ ಅನುಭವವನ್ನು ಮಕ್ಕಳು ಸವಿಯುವಂತೆ ಮಾಡಬೇಕು. ತಾವೂ ತಮ್ಮ ಬಾಲ್ಯವನ್ನು ಪುನರ್‌ಜೀವಿಸಬೇಕು! ಮಕ್ಕಳ ಬಾಲ್ಯವನ್ನು ದೈಹಿಕವಾಗಿ ಸುರಕ್ಷಿತವಾಗಿಸುವುದಷ್ಟೇ ಅಲ್ಲದೆ, ಭಾವನಾತ್ಮಕವಾಗಿ, ಬೌದ್ಧಿಕವಾಗಿ ಸುರಕ್ಷಿತವಾಗಿಸಬೇಕು. ಮಾನಸಿಕವಾಗಿ–ದೈಹಿಕವಾಗಿ, –ಭಾವನಾತ್ಮಕವಾಗಿ ಮಕ್ಕಳನ್ನು ಸಬಲರಾದ ವ್ಯಕ್ತಿಗಳನ್ನಾಗಿಸಬೇಕು.

## ಶಾಲೆಯಲ್ಲಿ ಲೈಂಗಿಕ ದೌರ್ಜನ್ಯಗಳು

ಶಾಲೆಯಲ್ಲಿ ಲೈಂಗಿಕ ದೌರ್ಜನ್ಯದ ಪ್ರಕರಣಗಳು ಎಷ್ಟಾಗುತ್ತಿವೆಯೆಂದರೆ ಅಪ್ಪ– ಅಮ್ಮ ಯಾರನ್ನು ನಂಬಬೇಕು, ಯಾರನ್ನು ನಂಬಬಾರದು ಎಂದು ಯೋಚಿಸುವಂತಾಗಿದೆ. ದಿನ ಬೆಳಗಾದರೆ ಬೆಚ್ಚಿ ಬೀಳಿಸುವಂತಹ ಸುದ್ದಿಗಳು. ಮೊನ್ನೆ ಒಂದು ಶಾಲೆಯ ಪ್ರಾಂಶುಪಾಲರು ಹೇಳಿದರು– 'ಮೇಡಂ, ಇಂದಿನ ದಿನಗಳಲ್ಲಿ ನಮಗೆ ಶಾಲೆಯಲ್ಲಿ ಕೆಲಸ ಮಾಡೋದೇ ಕಷ್ಟ ಆಗ್ಬಿಟ್ಟಿದೆ. ಜನರ ಅನುಮಾನ, –ಶಂಕೆಯ ಮಧ್ಯೆಯೇ ಮಕ್ಕಳಿಗೆ ನಾವು ಕಲಿಸಬೇಕು. ಮೊನ್ನೆ ನಮ್ಮ ವೃದ್ಧ ಡ್ರೈವರ್ ಎರಡನೇ ತರಗತಿಯ ಮಗುವನ್ನು ಎಲ್ಲರೆದುರೇ ಕೈಹಿಡಿದು ರಸ್ತೆ ದಾಟಿಸಿದರು. ಮರುದಿನ ಆ ಮಗುವಿನ ತಂದೆ –ತಾಯಿ ಶಾಲೆಗೆ ಬಂದು ಇದರ ಬಗ್ಗೆ ದೂರಿದರು!'

ಇದು ಅಪ್ಪ––ಅಮ್ಮ – –ಶಿಕ್ಷಕರು ಇಂದಿನ ಪರಿಸ್ಥಿತಿಯಲ್ಲಿ ಗೊಂದಲದಿಂದ ನರಳುತ್ತಿರುವ ಚಿತ್ರಣ. ಈ ಬಗ್ಗೆ ಕೆಲವು ಅಂಶಗಳನ್ನು ಗಮನಿಸಬೇಕು:

ಮೇಲಿನಂತಹ ಸಂದರ್ಭಗಳೂ ಎದುರಾಗಬಹುದಾದರೂ 'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ' ಎಂಬುದು ಇಂದಿನ ವಾಸ್ತವಿಕ ಸತ್ಯ. ಹಾಗಾಗಿ ಈ ಬಗ್ಗೆ ಎಲ್ಲಾ ಮಕ್ಕಳಿಗೆ ಮಾಹಿತಿ, –ತರಬೇತಿ ಅತ್ಯಗತ್ಯ. ಒಳ್ಳೆಯ ಮತ್ತು ಕೆಟ್ಟ ಸ್ಪರ್ಶವನ್ನು ಮಕ್ಕಳು ಸುಲಭವಾಗಿ ಗ್ರಹಿಸಬಲ್ಲರು. ಒಂದೊಮ್ಮೆ ಅಪ್ಪ–– ಅಮ್ಮಂದಿರಿಗೆ ಈ ಬಗ್ಗೆ ಗೊಂದಲವಾದರೆ ಮುಕ್ತ ಸಂವಹನವೊಂದೇ ದಾರಿ. ಮಕ್ಕಳೊಡನೆ ವ್ಯವಹರಿಸುವ ಶಾಲೆಯ ಯಾರೂ ಈ ಬಗೆಗೆ ಪಾರದರ್ಶಕವಾಗಿ, ವಸ್ತುನಿಷ್ಠವಾಗಿ ಮತ್ತು ಅಪಮಾನ ಎಂದು ಭಾವಿಸದೆ ಉತ್ತರ ನೀಡಬೇಕಾದ್ದಷ್ಟೇ ಮುಖ್ಯ.

ಮಕ್ಕಳಿಗೆ ಎದೆ, ಪೃಷ್ಠ ಮತ್ತು ಜನನಾಂಗಗಳನ್ನು ತಾಯಿಯಲ್ಲದೆ ಯಾರೇ ಸ್ಪರ್ಶಿಸಿದರೂ ಅದನ್ನು ಹೇಳುವಂತೆ, ತಡೆಯುವಂತೆ ಹೇಳಿಕೊಡಬೇಕು. ಅವರಿಗೆ ಇಷ್ಟವಾಗದ, ಮುಜುಗರ ತರಿಸುವ ಯಾವುದೇ ಸ್ಪರ್ಶವನ್ನೂ ಮುಕ್ತವಾಗಿ ಹೇಳುವ ಅವಕಾಶ ಬೇಕು. ಹಾಗೆ ಮಕ್ಕಳು ಹೇಳಿದಾಗ ಆ ವ್ಯಕ್ತಿ ಹಿರಿಯರಿಗೆ ಎಷ್ಟೇ 'ಸಂಭಾವಿತರು' ಎನಿಸಬಹುದಾದರೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಯಾರಿಂದಲೂ ಸಾಧ್ಯ ಎಂಬ ಅರಿವಿನೊಂದಿಗೆ ಪರಾಮರ್ಶಿಸಬೇಕು. ಮಗುವನ್ನು ಆ ಸಂದರ್ಭದಿಂದ ಕಾಪಾಡುವ ಎಲ್ಲಾ ವ್ಯವಸ್ಥೆ ಮಾಡಬೇಕು.

ಮನುಷ್ಯ ಸಹಜವಾಗಿ ತನ್ನನ್ನು ತಾನು ರಕ್ಷಿಸಿಕೊಳ್ಳುವ ಕಲೆ ಪ್ರತಿಯೊಬ್ಬರಿಗೂ ಇರುವಂತೆ ನಿಮ್ಮ ಮಕ್ಕಳಿಗೂ ಇರುತ್ತದೆ. ಹಾಗಾಗಿ ನಿಮ್ಮ ಮಕ್ಕಳು ಬಸ್ಸಿನಲ್ಲಿ ಹೋಗುವಾಗ, ಶಾಲೆಯಲ್ಲಿ ಇತರ ಮಕ್ಕಳ ಒಡನಾಟದಲ್ಲಿ, ಶಿಕ್ಷಕರೊಂದಿಗಿನ ಪಾಠ–, ಆಟ ಚಟುವಟಿಕೆಗಳಲ್ಲಿ ಸಾಮಾನ್ಯವಾಗಿ ಸುರಕ್ಷಿತವಾಗಿಯೇ ಇರುತ್ತಾರೆ.

ಹಾಗೊಮ್ಮೆ ನೀವು ಪತ್ರಿಕೆ, –ವಾಹಿನಿಗಳ ಸುದ್ದಿಗಳಿಂದ ಏನಾದರೂ ಕಲಿಯುವುದಿದ್ದರೆ, ಅದು ನಿಮ್ಮ ಮಕ್ಕಳಿಗೆ ನೀವು ಹೇಗೆ ಇಂಥ ಸನ್ನಿವೇಶಗಳನ್ನು ಎದುರಿಸುವ, ಪಾರಾಗುವ ಆತ್ಮರಕ್ಷಣೋಪಾಯಗಳನ್ನು ಕಲಿಸಬಲ್ಲಿರಿ ಎನ್ನುವುದಷ್ಟೇ. ನಾವು ಸಮಾಜದಲ್ಲಿ ಇದರ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಬೇಕು. ಬದಲಾಗಿ ಅನಾವಶ್ಯಕ ಆತಂಕ ಬೆಳೆಸಿಕೊಂಡು 'ಮಕ್ಕಳು ಶಾಲೆಗೇ ಹೋಗುವುದು ಬೇಡ' ಎನ್ನುವುದು ಮೂರ್ಖತನ!